ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-3 Issue 4, Jan-Feb 2022, Pp.105-113.
©*IIMRD*, Mysuru
www.iimrd.com

# ಪರಿವರ್ತನೆಯ ಹಾದಿಯಲ್ಲಿ ಮಹಿಳಾ ಕಾರ್ಮಿಕರು

**ಹನುಮಂತ. ಡಿ.**
ಸಂಶೋಧಕರು, ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

## ಸಾರಾಂಶ (Abstract)

*ಪಕ್ಷಿಗೆ ಹೇಗೆ ಒಂದು ರೆಕ್ಕೆಯಿಂದ ಹಾರುವುದು ಅಸಾಧ್ಯವಾಗಿರುತ್ತದೆಯೋ ಹಾಗೇ ಮಹಿಳೆಯರ ಸ್ಥಿತಿಗತಿಗಳು ಉತ್ತಮಗೊಳ್ಳದ ಹೊರತು ಜಗತ್ತಿನ ಕಲ್ಯಾಣದ ಬಗ್ಗೆ ಚಿಂತಿಸುವುದು ಅಸಾಧ್ಯವಾಗಿರುತ್ತದೆ. ಮಹಿಳೆಯರು ಇನ್ನು ಅಶಕ್ತರಿರುವುದರಿಂಲೇ ಮಹಿಳಾ ಸಶಕ್ತಿಕರಣ ಎಂಬ ವಿಷಯವು ಹೆಚ್ಚು ಪ್ರಾಮುಖ್ಯತೆ ಪಡೆದುಕೊಳ್ಳುತ್ತದೆ. ಅವರು ಸಶಕ್ತರಾಗುವ ತನಕ ಮುಂದುವರೆಯುತ್ತಲೇ ಇರುತ್ತದೆ. ಮಹಿಳೆಯರನ್ನು ಇನ್ನೂ ಒಂದು ಭೋಗದ ವಸ್ತುವಾಗಿ ಉಪಯೋಗಿಸಿ ಎಸೆಯಲಾಗುತ್ತಿರುವದರಿಂದ ಸಮಾಜದ ಮುಖ್ಯವಾಹಿನಿಯಿಂದ ಅವರನ್ನು ದೂರ ಇಟ್ಟು ಕಡೆಗಣಿಸಲಾಗುತ್ತಿರುವದರಿಂದ ಪುರುಷ ಪ್ರಧಾನವಾದ ಈ ಸಮಾಜವು ಮಹಿಳೆಯರಿಗೆ ಯಾವಾಗಲೂ ಸ್ವಾತಂತ್ರ್ಯ ಸ್ವಯಂ ಆಡಳಿತವನ್ನು ನಿರಾಕರಿಸುತ್ತಾ ಬಂದಿದೆ. ಈ ಲಿಂಗ ತಾರತಮ್ಯವು ಮಾನವೀಯ ಮುಖವನ್ನು ವಿಕಾರಗೊಳಿಸಿದೆ. ತಾರತಮ್ಯವು ಹೆಣ್ಣು ಮಗುವಿನ ಜನನಕ್ಕೆ ಮುಂಚೆಯೇ ಪ್ರಾಂರಭವಾಗಿ ಅದು ಅವಳ ಹೆಣ್ಣುತನದ ಜೀವನದುದ್ದಕ್ಕೂ ಉಳಿದುಬಿಡುತ್ತದೆ. ಪ್ರಸ್ತುತ ಅಧ್ಯಯನದಲ್ಲಿ ಮಹಿಳೆಯರು ಅಂದು, ಮಹಿಳೆ ಇಂದು ಮತ್ತು ಇಂದಿನ ಸಮಾಜದಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ಶೋಷಣೆ, ಹಲವಾರು ಕ್ಷೇತ್ರಗಳಲ್ಲಿ ಸಂಘ-ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ ಹಾಗು ಮಹಿಳೆಯರಿಗಾಗಿ ರೂಪಿಸಿರುವ ಯೋಜನೆಗಳನ್ನು ಕುರಿತು ವಿಸ್ತೃತವಾಗಿ ಚರ್ಚಿಸಲಾಗಿದೆ.*

**ಮುಖ್ಯಪದಗಳು (Keywords):** *ಮಹಿಳೆಯರು, ಕಾರ್ಮಿಕರು, ಸಶಕ್ತರು, ಸ್ಥಾನಮಾನ, ಸಬಲೀಕರಣ.*

### ಪೀಠಿಕೆ

ಜಗತ್ತಿನ ಅತೀ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ ಮಹಿಳೆಯರಿಗೆ ಉನ್ನತ ಸ್ಥಾನ ಕೊಟ್ಟಿದೆ ಎಂದು ಹೇಳಿಕೊಳ್ಳುವ ಭಾರತದಲ್ಲಿ ಒಟ್ಟು ಜನಸಂಖ್ಯೆಯ ಶೇ.50ರಷ್ಟನ್ನು ಪ್ರತಿನಿಧಿಸುತ್ತಾರೆ. ಅನಾದಿ ಕಾಲದಿಂದಲೂ ಭಾರತೀಯ ಮಹಿಳೆ ವೈಶಿಷ್ಟ್ಯ ಪೂರ್ಣವಾಗಿರುವಳು, ಸ್ನೇಹ, ಸಹನಶೀಲತೆ, ಮಮತೆ ಮುಂತಾದ ಸದ್ಗುಣಗಳ ಮನೆಯ ಸರ್ವೊತೋಮುಖ ಏಳಿಗೆಗಾಗಿ ಪರಿಶ್ರಮಪಡುತ್ತಾ ಆರ್ಥಿಕವಾಗಿ ಪುರುಷನ ಸಮಾನವಾಗಿ ದುಡಿಯುತ್ತಿದ್ದಾಳೆ. ಮಹಿಳೆಯರಿಗೆ ಇಷ್ಟೆಲ್ಲಾ ಸ್ಥಾನಮಾನ ಅಧಿಕಾರಗಳನ್ನು ಕೊಟ್ಟಿದ್ದಾಗಿಯು

*Please cite this article as: ಹನುಮಂತ. ಡಿ. (2022). ಪರಿವರ್ತನೆಯ ಹಾದಿಯಲ್ಲಿ ಮಹಿಳಾ ಕಾರ್ಮಿಕರು. ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(4). ಪು.ಸಂ.105–113.*

ಭಾರತದಲ್ಲಿ ಮಹಿಳೆಯರನ್ನು ದ್ವಿತಿಯ ಹೆಜ್ಜೆಯಲ್ಲಿ ನೋಡಿಕೊಳ್ಳಲಾಗುತ್ತಿದೆ. ಈ ರೀತಿ ಮಹಿಳೆಯರ ಮಹತ್ವವನ್ನು ಅರಿತೋ ಏನೋ ಪೂರ್ವಜರು ಮಾತ್ರ ಮಹಿಳೆಯರ ಸ್ಥಾನಕ್ಕೆ ಅತ್ಯಂತ ಗೌರವವನ್ನು ಕೋರಿದ್ದಾರೆ. ನಮ್ಮ ರಾಷ್ಟ್ರೀಯತೆಯನ್ನು ಮಾತೆಗೆ ಹೋಲಿಸಿ 'ಭಾರತ ಮಾತೆ' ಎಂದು ಕರೆಯಲಾಗುತ್ತದೆ.

ಭಾರತವು ಕೃಷಿ ಪ್ರಧಾನ ದೇಶವಾಗಿದ್ದರಿಂದ ಭೂಮಿಯೇ ಜೀವನಾಧಾರಕ್ಕೆ ಪ್ರಮುಖ ಮೂಲವಾಗಿದೆ. ಅಂತೆಯೇ ಮಹಿಳೆ ಇಲ್ಲದ ಜೀವನವು ಅಪೂರ್ಣವಿದ್ದಾಗಲೂ ಕೂಡಾ ಮಹಿಳೆಯರನ್ನು ಜೀವನದ ಇನ್ನೊಂದು ಅರ್ಥ ಎಂದು ಯಾವಾಗಲೂ ಪರಿಗಣಿಸಿಲ್ಲ ಎಂದೂ ಸ್ತ್ರೀ ನಮೂನ್ ಡಿ.ಬಿವಿಯಾರ್ ಹೇಳುತ್ತಾರೆ. ಇತಿಹಾಸವನ್ನು ಅವಲೋಕಿಸಿದಾಗ ಮಹಿಳೆಯರ ಸಬಲೀಕರಣಕ್ಕೆ ಸ್ವಾತಂತ್ರ್ಯಕ್ಕಾಗಿ ಶ್ರಮಿಸಿದ ಅನೇಕ ಮಹನಿಯರ ಬಗ್ಗೆ ತಿಳಿದುಬರುತ್ತದೆ. ಅವರಲ್ಲಿ ಪ್ರಮುಖರಾದವರೆಂದರೆ ಬುದ್ಧ, ಬಸವಣ್ಣ, ರಾಜಾರಾಮ್ ಮೋಹನ್‌ರಾಯ್, ಈಶ್ವರಚಂದ್ರ ವಿದ್ಯಾಸಾಗರ, ಸ್ವಾಮಿ ವಿವೇಕಾನಂದ, ಮಹಾತ್ಮಗಾಂಧಿ, ನೆಹರು ಮುಂತಾದವರು ಇವರಲ್ಲದೆ ಬ್ರೀಟಿಷ್ ಸರ್ಕಾರವು ಕೂಡಾ ಮಹಿಳೆಯರ ಸಶಕ್ತಿಕರಣಕ್ಕೆ ಕೆಲವೊಂದು ಕಾನೂನುಗಳನ್ನು ಜಾರಿಗೆ ತಂದಿತು. ಆದರೆ ಮಹಿಳೆಯರನ್ನು ಸಬಲೀಕರಣಗೊಳಿಸಬೇಕೆಂದು ಇಚ್ಛೆ ಹೊಂದಿದ ಜನರಿಂದ ಮಾತ್ರ ಮಹಿಳೆಯರ ಸಶಕ್ತಿಕರಣ ಮಾಡಲು ಸಾಧ್ಯವಾಗುವುದಿಲ್ಲ. ಮಹಿಳೆಯರು ಸ್ವಂತ ತಾವೇ ಮುಂದು ಬಂದು ಯಾವುದೇ ಜಾತಿ ಧರ್ಮ ಎಂದು ಭೇದ ಮಾಡದೆ ತಮ್ಮ ಸಶಕ್ತಿಕರಣದ ಕಡೆಗೆ ಒಗ್ಗಟ್ಟಾಗಿ ಮುಂದೆ ಸಾಗಬೇಕು. ಸಾಮಾನ್ಯ ಮಹಿಳೆಯರು ಈಗಾಲೇ ಸಶಕ್ತಿಕರಣಗೊಂಡು ಮಹತ್ವದ ಸಾಧನೆ ಮಾಡಿದ ಮಹಿಳೆಯರಿಂದ ಪ್ರಭಾವಿತವಾಗಿ ಅವರ ಮಾರ್ಗವನ್ನು ಅನುಸರಿಸಲು ಪ್ರಯತ್ನಿಯಸಬೇಕು. ಇಂತಹ ಪ್ರಭಾವಿ ಮಹಿಳೆಯರಲ್ಲಿ ಪ್ರಮುಖರಾದವರೆಂದರೆ ಇಂದಿರಾಗಾಂಧಿ, ವಿಜಯಲಕ್ಷ್ಮೀ ಪಂಡಿತ್, ಮದರ್ ತೆರೆಸಾ, ಸರೋಜಿನಿ ನಾಯ್ಡು, ಸುಚೆತಾ ಕೃಪಲಾನಿ ಮುಂತಾದವರು ಸಬಲೀಕರಣ ಹೊಂದಿದ್ದಾರೆ.

**ಮಹಿಳೆ ಅಂದು:** ಮಹಿಳೆ ಪುರಾಣಗಳಲ್ಲಿ, ವೇದ ಉಪನಿಷತ್ತುಗಳಲ್ಲಿ ಮಹಿಳೆ ಮಾತಾ ಹಾಗೂ ದೇವಿ ಎಂಬ ಉನ್ನತ ಪೀಠದಲ್ಲಿ ಕುಳ್ಳಿರಿಸಿ ಪುರುಷಗೆ ಸರಿ ಸಮಾನವಾದ ಸ್ಥಾನವನ್ನು ಕೊಡಲಾಗಿತ್ತು. ಆದರೆ ನಿಜವಾಗಿಯೂ ಅವಳ ಪರಸ್ಥಿತಿಯು ತೃಪ್ತಿಕರವಾಗಿರಲಿಲ್ಲ ಮನುಸ್ಮೃತಿಯ ದೃಷ್ಟಿಯಲ್ಲಿ ಅವಳು ಅತ್ಯಂತ ಅಮೂಲ್ಯ ಹಾಗೂ ಗೌರವಾನ್ವಿತಳಾಗಿದ್ದಳು ಹಾಗೂ ಅವಳಿಗೆ ಮೊದಲು ತಂದೆ ರಕ್ಷಣೆ ಕೊಡಬೇಕಾಗಿತ್ತು. ನಂತರ ಗಂಡ ಮತ್ತು ಕೊನೆಯದಾಗಿ ಅವಳ ಮಗ ಅವಳಿಗೆ ರಕ್ಷಣೆ ಕೊಡಬೇಕಾಗಿತ್ತು.

**ಮಹಿಳೆ ಇಂದು:** ಆಧುನಿಕ ಯುಗದಲ್ಲಿ ಪುರುಷರು ಈ ಅಮೂಲ್ಯವಾದ ಜೀವಿಯನ್ನು ಅಮೂಲ್ಯವಾದ ಸರಕನ್ನಾಗಿ ಬದಲಿಸಿ ತನ್ನ ಸ್ವಾಧೀನಪಡಿಸಿಕೊಂಡು ತನಗೆ ಬೇಕಾದ ಹಾಗೇ ಉಪಯೋಗಿಸಿಕೊಂಡು ನಂತರ ದಿಟ್ಟ ಮಹಿಳೆಯರನ್ನು ಸಮಾಜದ ಮುಖ್ಯ ವಾಹಿನಿಯಿಂದ ದೂರವಿಡಲಾಯಿತು. ಬಲಿಷ್ಠ ಕಾನೂನುಗಳಿದ್ದರೂ ಕೂಡಾ ಮಹಿಳೆಯರನ್ನು ಕ್ರೂರವಾಗಿ ಹಾಗೂ ಅನಾಗರಿಕವಾಗಿ ನಡೆಸಿಕೊಂಡು ಹಿಂಸಿಸಲಾಗುತ್ತಿದೆ. ಹೆಣ್ಣು ಭ್ರುಣ ಹತ್ಯೆ, ಹೆಣ್ಣು ಶಿಶು ಹತ್ಯೆ, ಬಾಲ ಕಾರ್ಮಿಕತೆ, ಬಾಲ್ಯವಿವಾಹ, ವರದಕ್ಷಿಣೆ, ಅತ್ಯಾಚಾರ, ಲೈಂಗಿಕ ಕಿರುಕುಳ, ಲಿಂಗ ಸಮಾನತೆ, ಬಲತ್ಕಾರದ ವೇಶ್ಯಾವಾಟಿಕೆ ಮುಂತಾದ ಕೂಪಗಳಲ್ಲಿ ಹಿಂಸಿಸಲಾಗುತ್ತಿದೆ. ಹಿಂದೂ ಒಬ್ಬ ಭಾರತೀಯ ವಿಧವೆಯ

ಪರಿಸ್ಥಿತಿಯು ಶೌಚನೀಯವಾಗಿದೆ. ಅವಳು ತನ್ನ ಕುಟುಂಬ ವರ್ಗದಿಂದ ಸಮಾಜದಿಂದ ಕಡೆಗಣಿಸಲ್ಪಟ್ಟಿದ್ದಾಳೆ.

**ಇಂದಿನ ಸಮಾಜದಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ಶೋಷಣೆ**

ಮದುವೆಯು ಒಂದು ವ್ಯಾಪಾರವಾಗಿ ಬಿಟ್ಟಿದೆ. ಇದು ವರನಿಗೆ ಲಾಭಕರವಾದರೆ ವಧುವಿನ ಕಡೆಯವರಿಗೆ ಖರ್ಚಿನದ್ದಾಗಿರುತ್ತದೆ. ವಧು ಅಪಾರ ಪ್ರಮಾಣದ ವರದಕ್ಷಿಣೆ ಕೊಡಬೇಕಾಗುತ್ತದೆ. ವರದಕ್ಷಿಣೆ ಹೆಸರಿನಲ್ಲಿ ಸಾವಿರಾರು ಹೆಣ್ಣು ಮಕ್ಕಳನ್ನು ಹಿಂಸಿಸಿ ಸಾಯಿಸಲಾಗುತ್ತಿದೆ. ರಾಷ್ಟ್ರೀಯ ಮಹಿಳಾ ಆಯೋಗವು (ಎನ್.ಡಬ್ಲ್ಯೂ.ಸಿ.) ಮತ್ತು ಮಹಿಳಾ ಹಕ್ಕು ಆಯೋಗ (ಡಬ್ಲ್ಯೂ.ಆರ್.ಸಿ.)ದ ವರದಿಯ ಪ್ರಕಾರ ಮಹಿಳೆಯರ ವಿರುದ್ಧ ಅಪರಾಧಗಳು ಆತಂಕಕಾರಿಯಾಗಿ ಹೆಚ್ಚುತ್ತಿವೆ. ಅಪ್ರಾಪ್ತ ಬಾಲಕಿಯರು ಇದಕ್ಕೆ ಸುಲಭವಾಗಿ ಬಲಿಯಾಗುತ್ತಿದ್ದಾರೆ. ಆರ್ಥಿಕವಾಗಿ ಹಾಗೂ ಭೌತಿಕವಾಗಿ ಉನ್ನತ ಮಟ್ಟದಲ್ಲಿರುವ ಮಹಿಳೆಯರು ಕೂಡಾ ಅಸಯ್ಯ ವರ್ತನೆಗಳಿಂದ ಹಾಗೂ ಲೈಂಗಿಕ ಶೋಷಣೆಗಳಿಂದ ಸುರಕ್ಷಿತರಾಗಿಲ್ಲ. ಉದಾಹರಣೆಗೆ ಅತೀ ಹೆಚ್ಚು ಸಾಕ್ಷರತೆಯನ್ನು ಹೊಂದಿದ ಹಿರಿಯ ಮಹಿಳಾ ಐಪಿಎಸ್ ಅಧಿಕಾರಿ ಶೊಷಣೆಗೆ ಒಳಗಾಗಿದ್ದಾಳೆ. ಆದರೆ ಇನ್ನು ಉಳಿದ ಸಾಮಾನ್ಯ ಮತ್ತು ನಿರ್ಗತಿಕ ಮಹಿಳೆಯರ ಪರಿಸ್ಥಿತಿಯನ್ನು ನಾವು ಊಹಿಸಿಕೋಳ್ಳಬಹುದಾಗಿದೆ.

ಭಾರತೀಯ ಸಮಾಜದ ಮತ್ತೊಂದು ಅನಿಷ್ಟ ಪದ್ಧತ್ತಿ ಎಂದರೆ ಬಾಲ್ಯ ವಿವಾಹ ಮಹಿಳಾ ಸಶಕ್ತಿಕರಣ ಎಂಬ ವಿಷಯವು ಇನ್ನು ಅಸ್ಥಿತ್ವದಲ್ಲಿರುವುದು ನಾಚಿಕೆಗೇಡಿನ ಸಂಗತಿಯಾಗಿದೆ. ದೇಶವು 2030ರ ಹೊತ್ತಿಗೆ ಯೋಜಿತ ಅಭಿವೃದ್ಧಿ ಸಾಧಿಸಬೇಕಾದರೆ ಬಹಳಷ್ಟು ಯೋಜನೆಗಳು ಬೇಕಾಗುತ್ತವೆ. 1952ರಲ್ಲಿ ಸಂಸತ್ತಿನಲ್ಲಿ ಶೇಕಡ 44ರಷ್ಟು ಇದ್ದ ಮಹಿಳಾ ಪ್ರತಿನಿಧಿತ್ವವವು ಈಗಿನ ಶೇಕಡ 89ರಷ್ಟು ತಲುಪಲು ಸುಮಾರು ಐವತ್ತು ವರ್ಷಗಳನ್ನು ಹಾಗೂ 13 ಲೋಕಸಭೆ ಚುನಾವಣೆಗಳನ್ನು ತೆಗೆದುಕೊಂಡಿತು. ಸಂಸತ್ತಿನ ಒಳಗೆ ಮತ್ತು ಹೊರಗೆ ಬಹಳಷ್ಟು ಚರ್ಚೆಯ ನಂತರ ಸಂಸತ್ತು 73ನೇ ಮತ್ತು 74ನೇ ಸಂವಿಧಾನ ತಿದ್ದುಪಡಿಗಳನ್ನು ಮಾಡಿ ಪಂಚಾಯತ್ ರಾಜ್ ವಸ್ಥೆಯಲ್ಲಿ ಮಹಿಳೆಯರಿಗೆ ಶೇಕಡಾ 50ರಷ್ಟು ಮೀಸಲಾತಿಯನ್ನು ಒದಗಿಸಿತು.

ಒಂದು ಜೀವವನ್ನು ಸೃಷ್ಠಿ ಮಾಡುವ ಶಕ್ತಿ ಮಹಿಳೆಗೆ ಇದೆ ಎಂದಾದರೆ ಖಂಡಿತವಾಗಿ ಅವಳಲ್ಲಿ ಅಮೋಘವಾದ ಶಕ್ತಿ ಇದೆ ಎಂದರ್ಥ. ಮಾತೃ ಶಕ್ತಿ, ವಾತ್ಸಲ್ಯ, ಸಹನೆ, ಪ್ರೀತಿ, ತಾಳ್ಮೆ. ಹಾರೈಕೆ, ಸತ್ಕಾರ, ಸನ್ಮಾನ, ಸಾಂತ್ವನ ಗುಣಗಳು ಆಕೆಗೆ ಹುಟ್ಟಿನಿಂದಲೇ ಬೆಳೆಸಿಕೊಂಡು ಬಂದಿರುತ್ತಾಳೆ. ಸಮಾಜದಲ್ಲಿ ಇರುವ ಪರಿಸ್ಥಿತಿಗಳು ಕಟ್ಟುಪಾಡುಗಳಿಗೆ ಮತ್ತು ಮಹಿಳೆಗೆ ಸಿಗುತ್ತಿರುವ ಪ್ರಾಧಾನ್ಯತೆಗಳಿಗೆ ಸರಿಯಾಗಿ ಅವಳಿಗೆ ಸ್ಥಾನ ಮಾನ ಸಿಗುತ್ತಿದೆ. ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಮಹಿಳೆ ಪುರುಷರಿಗೆ ಸಮಾನಳು. ತನ್ನ ಜೀವನವನ್ನು ತಾನೇ ರೂಪಿಸಿಕೊಂಡಿರುವುದನ್ನು ನೋಡಬಹುದು. ನಮ್ಮ ದೇಶದಲ್ಲಿ ಕೌಟುಂಬಿಕ ಪದ್ಧತಿ, ಸಂಸ್ಕೃತಿ, ಸಂಸ್ಕಾರಗಳು, ಕುಟುಂಬ ನಿರ್ವಹಣೆ ಹಾರೈಕೆ ಮಾಡುವ ಜವಾಬ್ದಾರಿ ಅನಾದಿಕಾಲದಿಂದಲೂ ಬಂದಿರುವದರಿಂದ ಸಣ್ಣ ವಯಸ್ಸಿನಿಂದಲೇ ಮಹಿಳೆಗೆ ಹಲವಾರು ನೀತಿ ನಿಯಮಗಳನ್ನು, ಕಟ್ಟುಪಾಡುಗಳನ್ನು ಹಾಕಲಾಗುತ್ತದೆ. ಇದರಿಂದಾಗಿ ಅವಳು ಮನೆ, ಸಂಸಾರ, ಮಕ್ಕಳು, ಮನೆಯ

ಕಟ್ಟುಪಾಡುಗಳು, ಹಬ್ಬ–ಹರಿದಿನ, ಸಂಸ್ಕಾರಗಳನ್ನು ಪಾಲಿಸುವವಳು ಎಂದು ಆಗಿ ಬಿಡುತ್ತಾಳೆ. ಈ ಅಗಾಧವಾದ ಜವಾಬ್ದಾರಿಯನ್ನು ಬಹಳ ನಾಜೂಕಾಗಿ ನಿಭಾಯಿಸಿಕೊಂಡು ಬಂದಿರುತ್ತಾಳೆ. ಅವಳಲ್ಲಿ ಹುಟ್ಟಿನಿಂದ ಬಂದತಹ ಗುಣಗಳನ್ನು ಕೌಶಲ್ಯಗಳನ್ನು ತನ್ನ ಮನೆಯ ನಿರ್ವಹಣೆಯಲ್ಲಿ ತೋರಿಸುತ್ತಿದ್ದಾಳೆ.

ಇಂದು ದೇಶದಾದ್ಯಂತ ಹಲವಾರು ಮಹಿಳಾ ಪರ ಸಂಘಟನೆಗಳು ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ. ಮಹಿಳಾ ಪರ ಕಾನೂನು, ಮಹಿಳಾ ದೌರ್ಜನ್ಯ, ಮಹಿಳಾ ಸಬಲೀಕರಣ, ಮಹಿಳೆ ಮತ್ತು ಮಕ್ಕಳ ಕಲ್ಯಾಣಾರ್ಥ ಕಾರ್ಯಕ್ರಮಗಳು ಪಾಲನಾ ಕೇಂದ್ರಗಳು ಹೀಗೆ ಹಲವಾರು ಕ್ಷೇತ್ರಗಳಲ್ಲಿ ಈ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ. ಕೆಲವೊಂದು ಸಂಸ್ಥೆಗಳ ವಿವರ ಈ ಕೆಳಗಿನಂತಿದೆ.

1. **ಸ್ತ್ರೀ ಮುಕ್ತಿ ಸಂಘಟನೆ (ಮುಂಬೈ):** ಈ ಸಂಸ್ಥೆಯು ಲಿಂಗ ತಾರತಮ್ಯ ನಿವಾರಣೆ, ಕೌಟುಂಬಿಕ ದೌರ್ಜನ್ಯ ತಡೆ, ಕಸಾ ಯೆಕ್ಕುವ ಕುಟುಂಬಗಳಿಗೆ ಕಾರ್ಯಕ್ರಮ, ಹದಿ–ಹರೆಯದ ಮಕ್ಕಳಿಗೆ ಕಾರ್ಯಕ್ರಮ ಮತ್ತು ಪಾಲನಾ ಕೇಂದ್ರಗಳನ್ನು ನಡೆಸುತ್ತಿವೆ.
2. **ಸ್ತ್ರೀ ಶಕ್ತಿ ಸಂಘಗಳು:** ಕರ್ನಾಟಕ ಸರ್ಕಾರದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯು ಮಹಿಳೆಯರ ಸಂಘಟನೆಗಾಗಿ ಸ್ತ್ರೀ–ಶಕ್ತಿ, ಸ್ವ–ಸಹಾಯ ಸಂಘಗಳನ್ನು ರಚನೆ ಮಾಡಿ ಮಹಿಳೆಯರನ್ನು ಸಬಲೀಕರಣಗೊಳಿಸುವಲ್ಲಿ ಪ್ರಯತ್ನಿಸುತ್ತಿವೆ.
3. **ನಿರ್ಮಾಣ್ ಸಂಸ್ಥೆ:** ಆಸಕ್ತ ವಿದ್ಯಾರ್ಥಿಗಳಿಂದ ಪ್ರಾರಂಭಿಸಲಾದ ಸಂಸ್ಥೆ, ಮಹಿಳಾ ಮತ್ತು ಮಕ್ಕಳ ಪರವಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ರಾಜಸ್ಥಾನ, ಆಂಧ್ರಪ್ರದೇಶ ರಾಜ್ಯಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ.
4. **ಸಂಜೀವಿನಿ ವಿಕಾಸ್ ಜನ ಕಲ್ಯಾಣ ಸಮಿತಿ:** 2000ನೇ ಇಸ್ವಿಯಲ್ಲಿ ಏಳು ಜನರ ತಂಡ ಈ ಸಂಸ್ಥೆಯನ್ನು ಪ್ರಾರಂಭಿಸಿದರು. ಮಹಿಳಾ ಸಬಲೀಕರಣ, ಜೀವನೋಪಾಯ ಚಟುವಟಿಕೆ, ಮೂಡಿಸುವ ಕಾರ್ಯಕ್ರಮ ಮಾಹಿತಿ ತಂತ್ರಜ್ಞಾನದ ಬಗ್ಗೆ ತಿಳುವಳಿಕೆ ನೀಡುವುದು ಹೇಗೆ ಹಲವಾರು ಮಹಿಳಾಪರಾಭಿವೃದ್ಧಿ ಕಾರ್ಯಕ್ರಮಗಳನ್ನು ನಡೆಸುತ್ತದೆ.
5. **ಸ್ತ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಯೋಜನೆ:(ರಿ)** ಇದರ ಜ್ಞಾನ ವಿಕಾಸ ಮಹಿಳಾ ಕಾರ್ಯಕ್ರಮ. ಮಹಿಳಾ ಸಬಲೀಕರಣದ ಮೂಲ ಉದ್ದೇಶವನ್ನು ಇಟ್ಟುಕೊಂಡು ಪ್ರಸ್ತುತ ದಿನಗಳಲ್ಲಿ ಮಹಿಳೆಯರು ಯಾವ ರೀತಿ ವ್ಯವಹರಿಸಬೇಕು. ಅವರು ಮುಖ್ಯವಾಗಿ ತಿಳಿದುಕೊಳ್ಳಬೇಕಾದ ವಿಚಾರಗಳು, ತನ್ನ ಕುಂಟುಂಬ ನಿರ್ವಹಣೆಯಲ್ಲಿ ತನ್ನನ್ನು ತೊಡಗಿಸಿಕೊಳ್ಳಬಹುದು ಹೇಗೆ ಎಂಬ ನಿರಂತರವಾದ ತಿಳುವಳಿಕೆಯನ್ನು ಮೂಡಿಸುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಕೌಟುಂಬಿಕ ಸಾಮರಸ್ಯ, ಶಿಕ್ಷಣ, ಆರೋಗ್ಯ, ನೈರ್ಮಲ್ಯ, ಪೌಷ್ಠಿಕ ಅಹಾರ, ಸ್ವ–ಉದ್ಯೊಗ, ಸರ್ಕಾರಿ ಸೌಲಭ್ಯಗಳು, ಮಹಿಳಾ ಪರ ಕಾನೂನುಗಳು ಎಂಬ ಆರು ಮೂಲಭೂತ ವಿಚಾರಗಳ ಬಗ್ಗೆ ಮಹಿಳೆಯರು ತಿಳಿದುಕೊಂಡಿರಬೇಕು ಎಂಬ ಮಹತ್ವಾಕಾಂಕ್ಷೆಯಿಂದ ಮಾತಾಶ್ರೀ ಹೇಮಾವತಿ ಹೆಗಡೆಯವರು ಈ ವಿನೂತನವಾದ ಕಾರ್ಯಕ್ರಮದ ನೇತೃತ್ವ ವಹಿಸಿರುತ್ತಾರೆ. ಸುಮಾರು 50 ರಿಂದ 60 ಮಹಿಳೆಯರನ್ನು

ಹೊಂದಿರುವ ಕೇಂದ್ರಗಳಲ್ಲಿ ಪ್ರತಿ ತಿಂಗಳಿಗೊಮ್ಮೆ ಎರಡು ತಾಸುಗಳ ಕಾಲ ಮಹಿಳೆಯರು ವಿವಿಧ ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಾರೆ. ಈ ಕಾರ್ಯಕ್ರಮಗಳಿಂದಾಗಿ ಮಹಿಳೆಯರು ಇಂದು ಆತ್ಮಸ್ಥೈರ್ಯ ಬೆಳೆಸಿಕೊಂಡು ತಮ್ಮ ಕುಟುಂಬದ ಅಭಿವೃದ್ಧಿಯಲ್ಲಿ ತಮ್ಮದೆ ಆದತಂಹ ಪಾಲು ನೀಡುತ್ತಿದ್ದಾರೆ.

ಸ್ವಾತಂತ್ರ್ಯಾ ನಂತರ ಹಕ್ಕುಗಳ ರಕ್ಷಣೆಗೆ, ಸುರಕ್ಷತೆಗೆ, ಸ್ವಾವಲಂಬಿ ಜೀವನಕ್ಕೆ, ಸಬಲೀಕರಣಕ್ಕೆ ಸರ್ಕಾರಗಳು ಅನೇಕ ಕ್ರಮಗಳನ್ನು ಕೈಗೊಳ್ಳುತ್ತಿದೆ. ಸಂವಿಧಾನಾತ್ಮಕವಾಗಿಯು ಮಹಿಳೆಯ ಸಮಾನ ಸ್ಥಾನಮಾನ ಪಡೆದಿದ್ದಾಳೆ. ಆದಾಗ್ಯೂ ಭಾರತದಲ್ಲಿ ಮಹಿಳಾ ಸಮಾನತೆ ಎಂಬುದು ಇನ್ನು ಮರೀಚಿಕೆ ಎಂದರೆ ತಪ್ಪಾಗಲಾರದು. ನಿತ್ಯ ಕಿವಿಗೆ ಅಪ್ಪಳಿಸುವ ಕೌಟುಂಬಿಕ ಹಿಂಸೆ, ತಾರತಮ್ಯ ಅತ್ಯಾಚಾರ, ದೌರ್ಜನ್ಯ ಪ್ರಕರಣಗಳು, ಸ್ತ್ರೀ ಸಶಕ್ತಿಕರಣಕ್ಕೆ, ಸಬಲೀಕರಣಕ್ಕೆ, ಭಾರತ ಮತಷ್ಟು ಕ್ರಮ ಕೈಗೊಳ್ಳಬೇಕೆಂಬುವದನ್ನು ಸಾರಿ ಹೇಳುತ್ತಿವೆ. ಈ ಹಿನ್ನೆಲೆಯಲ್ಲಿ ಸರ್ಕಾರಗಳು ಮಹಿಳಾ ಸಬಲೀಕರಣಕ್ಕೆ ಈಗಾಗಲೇ ಜಾರಿಗೆ ತಂದಿರುವ ಕೆಲ ಯೋಜನೆಗಳು ಇಲ್ಲಿವೆ.

**ಸುಕನ್ಯಾ ಸಮೃದ್ಧಿ ಯೋಜನೆ**

ಸುಕನ್ಯಾ ಸಮೃದ್ದಿ ಯೋಜನೆಯು **ಭೇಟಿ ಬಚಾವೋ ಬೇಟಿ ಪಡಾವೋ** ಅಭಿಯಾನದ ಅಂಗವಾಗಿ ಪ್ರಾರಂಭಿಸಲಾದ ಯೋಜನೆಯಾಗಿದೆ. ಬಡ ಕುಟುಂಬದಲ್ಲಿ ಜನಿಸುವ ಹೆಣ್ಣು ಮಗುವಿಗೆ ಒಂದು ಸಣ್ಣ ಉಳಿತಾಯ ಠೇವಣಿ ಇಡುವ ಯೋಜನೆಯಾಗಿದೆ. ಹೆಣ್ಣು ಮಗು ಜನಿಸಿದ ನಂತರ ಹತ್ತು ವರ್ಷದ ಒಳಗಾಗಿ ಯಾವುದೇ ಪೋಸ್ಟ್ ಆಫೀಸ್ ಅಥವಾ ಕಮರ್ಷಿಯಲ್ ಬ್ಯಾಂಕಿನಲ್ಲಿ ಖಾತೆ ತೆರೆಯಬಹುದು. ಇದಕ್ಕೆ ತಂದೆ, ತಾಯಿ ಅಥವಾ ಪೋಷಕರು ವರ್ಷಕ್ಕೆ ಎಷ್ಟಾದರು ಹಣ ಡಿಪಾಸೀಟ್ ಮಾಡಬಹುದು. ಈ ಹಣಕ್ಕೆ ಶೇಕಡ 8.6ರಷ್ಟು ಬಡ್ಡಿ ಬರುತ್ತದೆ ಮತ್ತು ಬಡ್ಡಿ ಆದಾಯವು ತೆರಿಗೆ ಮುಕ್ತವಾಗಿರುತ್ತದೆ. ಹೆಣ್ಣು ಮಗುವಿನ ಹತ್ತು ವರ್ಷ ತುಂಬಿದ ಬಳಿಕ ಉಳಿತಾಯ ಮಾಡಿದ ಹಣದಲ್ಲಿ ಶೇಕಡಾ 50ರಷ್ಟು ಹಣವನ್ನು ಶೈಕ್ಷಣಿಕ ಖರ್ಚಿಗೆ ಬಳಸಿಕೊಳ್ಳಬಹುದು. ಇತ್ತೀಚೆಗೆ ಭಾರತದಲ್ಲಿ ಮಹಿಳೆಯರು ಶಿಕ್ಷಣ, ರಾಜಕೀಯ, ಮಾಧ್ಯಮ, ಕಲೆ ಮತ್ತು ಸಾಂಸ್ಕೃತಿಕ, ಸೇವಾ ವಿಭಾಗಗಳು, ವಿಜ್ಞಾನ ಮತ್ತು ತಾಂತ್ರಿಕ ಇತ್ಯಾದಿ ಕ್ಷೇತ್ರಗಳಲ್ಲಿ ಭಾಗವಹಿಸುತ್ತಿದ್ದಾರೆ. ಭಾರತೀಯ ಸಂವಿಧಾನವು ಮಹಿಳೆಯರಿಗೆ ಸಮಾನತೆಯನ್ನು ಒದಗಿಸಿದ್ದರೂ ಕೂಡಾ ರಾಜ್ಯದಿಂದ ತಾರತಮ್ಯವಿರಕೂಡದು. ಇಷ್ಟಲ್ಲದೆ ರಾಜ್ಯಗಳು ಮಹಿಳೆಯರ ಮತ್ತು ಮಕ್ಕಳ ಪರವಾಗಿ ಹಲವು ಸವಲತ್ತುಗಳನ್ನು ಒದಗಿಸಿದೆ. ಮಹಿಳೆಯರಿಗೆ ಸೂಕ್ತವಾದ ಮತ್ತು ಮಾನವೀಯತೆಯಿಂದ ಕೂಡಿದ ಕೆಲಸದ ವಾತಾವರಣ ಮತ್ತು ಮಾತೃತ್ವದ ಸವಲತ್ತುಗಳನ್ನು ಭದ್ರತೆ ನೀಡುವಂತಹ ಅವಕಾಶಗಳನ್ನು ಕಲ್ಪಿಸಿದೆ.

**ನಾರಿ ಶಕ್ತಿ ಪುರಸ್ಕಾರ ಯೋಜನೆ**

ಈ ಯೋಜನೆಯು 1999ರಲ್ಲಿ ಜಾರಿಗೆ ಬಂದಿದೆ. ಮಹಿಳಾ ಸಬಲೀಕರಣಕ್ಕಾಗಿ ಶಾಶ್ವತ ಕೊಡುಗೆ ನೀಡುವ, ದುಡಿಯುವ ಹೆಣ್ಣು ಮಕ್ಕಳನ್ನು ಗುರುತಿಸಿ ನೀಡುವ ಪುರಸ್ಕಾರವಾಗಿದೆ. ಇದು ಭಾರತದಲ್ಲಿ ನೀಡಲಾಗುವ ಅತ್ಯುನ್ನತ ನಾಗರೀಕ ಗೌರವಗಳಲ್ಲಿ ಒಂದಾಗಿದೆ. ಪ್ರತಿ ವರ್ಷ ಮಾರ್ಚ್ 8ರಂದು ಅರ್ಹ

ಸಾಧಕಿಯರಿಗೆ ದೇಶದ ರಾಷ್ಟ್ರಪತಿ ಪ್ರಶಸ್ತಿ ಪ್ರಧಾನ ಮಾಡುತ್ತಾರೆ. ಇದರಲ್ಲಿ ಪ್ರಶಸ್ತಿ ಪತ್ರ ಮತ್ತು ಒಂದು ಲಕ್ಷ ನಗದನ್ನು ಒಳಗೊಂಡಿರುತ್ತದೆ.

**ಪ್ರಧಾನ ಮಂತ್ರಿ ಉಜ್ವಲ ಯೋಜನೆ**

ಬಡತನ ರೇಖೆಗಿಂತ ಕೆಳಗಿರುವ ಮಹಿಳೆಯರಿಗೆ ಹೊಗೆಯುಕ್ತ ಅಡುಗೆ ಮನೆಯಿಂದ ಮುಕ್ತಿ ನೀಡಿ ಶುದ್ಧ ಇಂಧನವನ್ನು ಒದಗಿಸುವ ಮಹತ್ತರ ಉದ್ದೇಶದಿಂದ 2016ರಲ್ಲಿ ಈ ಯೋಜನೆಯನ್ನು ಜಾರಿಗೆ ತರಲಾಗಿದೆ. ಪಳಯುಳಿಕೆ ಇಂಧನವನ್ನು ಅಡುಗೆಗಾಗಿ ಬಳಸುವುದರಿಂದ ಉಂಟಾಗುವ ಆರೋಗ್ಯ ಸಮಸ್ಯೆಗಳನ್ನು ನಿರ್ಮೂಲನೆ ಮಾಡುವುದು. ಅಡುಗೆಗೆ ಬಳಸುವ ಇಂಧನಗಳ ಪರಿಣಾಮವಾಗಿ ಸಂಭವಿಸುವ ಸಾವು ನೋವುಗಳನ್ನು ಕಡಿಮೆ ಮಾಡುವುದು ಈ ಯೋಜನೆಯ ಉದ್ದೇಶವಾಗಿದೆ.

**ಬಾಕ್ಸ್ ಪೋರ್ಟಲ್ ಯೋಜನೆ**

ಉದ್ಯೋಗ ಸ್ಥಳಗಳಲ್ಲಿ ಲೈಗಿಂಕ ದೌರ್ಜನ್ಯ ಎದುರಿಸುವ ಮಹಿಳೆಯರಿಗೆ ಸೂಕ್ತ ಪರಿಹಾರ ಅಥವಾ ಸುರಕ್ಷಿತ ವಾತಾವರಣ ನಿರ್ಮಿಸುವ ಉದ್ದೇಶದಿಂದ 2018ರಲ್ಲಿ ಈ ಯೋಜನೆಯನ್ನು ಜಾರಿಗೆ ಮಾಡಲಾಗಿದೆ. ಇದರಡಿಯಲ್ಲಿ ಉದ್ಯೋಗಸ್ಥ ಮಹಿಳೆಯರು ಉದ್ಯೋಗ ಮಾಡುವ ಸ್ಥಳದಲ್ಲಿನ ಯಾವುದೇ ರೀತಿಯ ದೌರ್ಜನ್ಯದ ಬಗ್ಗೆ ದೂರು ನೀಡಬಹುದಾಗಿದೆ. ಈ ದೂರು ನೇರವಾಗಿ ಕೇಂದ್ರ ಮತ್ತು ರಾಜ್ಯದ ಸಂಬಂಧಿತ ಅಧಿಕಾರಿಗಳ ಬಳಿ ಹೊಗುವುದರಿಂದ ಶೀಘ್ರ ಕ್ರಮ ಕೈಗೊಳ್ಳಲಾಗುತ್ತದೆ.

**ಸ್ವಾಧಾರ್ ಗ್ರೇ ಸ್ಕೀಮ್**

ಕೌಟುಂಬಿಕ ಸಮಸ್ಯೆ, ಅಪರಾಧ, ಹಿಂಸೆ, ಮಾನಸಿಕ ಒತ್ತಡ, ಸಾಮಾಜಿಕ ಬಹಿಷ್ಕಾರ ಮುಂತಾದ ಸಂದರ್ಭಗಳಲ್ಲಿ ಮಹಿಳೆಯರಿಗೆ ತಾತ್ಕಾಲಿಕ ವಸತಿ ಸೌಲಭ್ಯ ಒದಗಿಸುವ ಯೋಜನೆ ಇದಾಗಿದೆ. ಇದೇ ರೀತಿ ಉದ್ದೇಶವನ್ನು ಹೊಂದಿರುವ ಇನ್ನೊಂದು ಯೋಜನೆ 'ಶಾರ್ಟ ಸ್ಟೇ ಹೋಂ'. ಈ ಯೋಜನೆ ನಿರ್ಗತಿಕರಾದ ಮಹಿಳೆಯರಿಗೆ ಪ್ರಾಥಮಿಕವಾಗಿ ಅಹಾರ, ವಸತಿ, ಬಟ್ಟೆ, ಮೆಡಿಕಲ್ ಟ್ರೀಟಮೆಂಟ್ ಒದಗಿಸಲಾಗುತ್ತದೆ. ಕುಟುಂಬದ ಅಥವಾ ಸಮಾಜದಲ್ಲಿ ಅವರ ಮರು ಹೊಂದಾಣಿಕೆಗೆ ಕ್ರಮಗಳನ್ನು ತೆಗೆದುಕೊಳ್ಳಲು ಅವರಿಗೆ ಕಾನೂನು ನೆರವು ಮತ್ತು ಮಾರ್ಗದರ್ಶನವನ್ನು ನೀಡಲಾಗುತ್ತದೆ. ಅಪರಾಧ ಮುಕ್ತವಾಗಿ ಘನತೆಯಿಂದ ಬಾಳಲು ಈ ಯೋಜನೆ ಅನುವು ಮಾಡಿಕೊಡುತ್ತದೆ.

**ವರ್ಕಿಂಗ್ ಹ್ಯುಮನ್ ಹಾಸ್ಟೆಲ್**

ಉದ್ಯೋಗಸ್ಥ ಮಹಿಳಾ ಸುರಕ್ಷತೆ ದೃಷ್ಟಿಯಿಂದ ಜಾರಿಗೆ ತರಲಾದ ಯೋಜನೆ ಇದಾಗಿದೆ. ಮಕ್ಕಳಿಗೆ ಡೇ ಕೇರ್ ವ್ಯವಸ್ಥೆಯನ್ನು ಒಳಗೊಂಡಿದ್ದು, ನಗರ ಮತ್ತು ಗ್ರಾಮೀಣ ಪ್ರದೇಶದಲ್ಲೂ ಈ ಸೌಲಭ್ಯವಿದೆ. ಮೆಟ್ರೋ ನಗರಗಳಲ್ಲಿ ತಿಂಗಳಿಗೆ 50,000ಕ್ಕಿಂತ ಕಡಿಮೆ ಆದಾಯ ಇರುವ ಹಾಗೂ ಉಳಿದ ಸ್ಥಳಗಳಲ್ಲಿ ತಿಂಗಳಿಗೆ 35,000ರ ಕಡಿಮೆ ಆದಾಯವಿರುವ ಯಾವುದೇ ಮಹಿಳೆಯು ಈ ಸೌಲಭ್ಯ ಪಡೆಯಬಹುದು. ಈ ಯೋಜನೆಯಡಿ 890 ಹಾಸ್ಟೆಲ್‌ಗಳು ಮಂಜೂರಾಗಿದ್ದು, 66,000 ಉದ್ಯೋಗಸ್ಥ ಮಹಿಳೆಯರು ಈ ಯೋಜನೆಯ ಫಲಾನುಭವಿಗಳಾಗಿದ್ದಾರೆ.

**ಒನ್‌ಸ್ಟಾಪ್ ಸೆಂಟರ್ ಯೋಜನೆ**

ಈ ಯೋಜನೆಯು ಖಾಸಗಿ ಅಥವಾ ಸಾರ್ವಜನಿಕ ವಲಯಗಳಲ್ಲಿ ದೌರ್ಜನ್ಯ ಎದುರಿಸುವ ಮಹಿಳೆಯರಿಗೆ ಒಂದೇ ಸೂರಿನಡಿ ಬೆಂಬಲ ಮತ್ತು ನೆರವು ನೀಡುವ ಯೋಜನೆಯಾಗಿದೆ. ಮಹಿಳೆಯರ ಮೇಲಿನ ಯಾವುದೇ ರೀತಿಯ ಹಿಂಸಾಚಾರದ ವಿರುದ್ಧ ಹೋರಾಡಲು ನೊಂದ ಹೆಣ್ಣು ಮಕ್ಕಳಿಗೆ ವೈದ್ಯಕೀಯ, ಕಾನೂನು ಬೆಂಬಲ ಮತ್ತು ಸಮಾಲೋಚನೆಯಂತಹ ತುರ್ತು ನೆರವನ್ನು ನೀಡಲಾಗುತ್ತದೆ. ನಿರ್ಭಯ ಫಂಡ್ ಮೂಲಕ ಈ ಯೋಜನೆಗೆ ಹಣ ಒದಗಿಸಲಾಗುತ್ತದೆ.

**ಭೇಟಿ ಬಚಾವೋ ಭೇಟಿ ಪಡಾವೋ**

ಹೆಣ್ಣು ಭ್ರೂಣ ಹತ್ಯೆಯನ್ನು ತಡೆಯುವ ಮಹತ್ತರ ಉದ್ದೇಶದಿಂದ ಜನವರಿ 22, 2015ರಂದು ಹರಿಯಾಣದ ಪಾಣಿಪತ್‌ಲ್ಲಿ ಈ ಯೋಜನೆ ಜಾರಿಗೆ ತರಲಾಯಿತು. ಈ ಯೋಜನೆಯು ಮೊದ ಮೊದಲಿಗೆ ಸ್ತ್ರೀ ಪುರುಷ ಅನುಪಾತದ ಬಗ್ಗೆ ಜಾಗೃತಿ ಮೂಡಿಸುತ್ತಿದ್ದರು. ಆನಂತರದಲ್ಲಿ ಹೆಣ್ಣು ಭ್ರೂಣ ಹತ್ಯೆ, ತಾರತಮ್ಯ ಆಧಾರಿತ ಶಿಕ್ಷಣದ ವಿರುದ್ಧ ಜಾಗೃತಿ ಮೂಡಿಸುತ್ತಿದೆ. ಈ ಯೋಜನೆಯಿಂದ ಅಲ್ಪ ಮಟ್ಟಿಗೆ ಮಹಿಳಾ ಸಾಕ್ಷರತೆ ಮತ್ತು ಸ್ತ್ರೀ ಪುರುಷರ ಅನುಪಾತ ಹೆಚ್ಚಾಗಿದೆ ಎಂದು ಹೇಳಬಹುದು.

**ಮಹಿಳಾ ಶಕ್ತಿ ಕೇಂದ್ರ**

ಗ್ರಾಮೀಣ ಮಹಿಳೆಯರ ಸಬಲೀಕರಣ ಉದ್ದೇಶದಿಂದ 2017ರಲ್ಲಿ ಈ ಯೋಜನೆಯನ್ನು ಜಾರಿಗೆ ತರಲಾಗಿದೆ. 155 ಹಿಂದುಳಿದ ಜಿಲ್ಲೆಗಳ ಸ್ವಯಂ ಸೇವಕ ವಿದ್ಯಾರ್ಥಿಗಳ ಮೂಲಕ ಗ್ರಾಮೀಣ ಮಹಿಳೆಯರಿಗೆ ಕೌಶಲ್ಯ ಅಭಿವೃದ್ಧಿ, ಉದ್ಯೋಗ, ಡಿಜಿಟಲ್ ಸಾಕ್ಷರತೆ, ಆರೋಗ್ಯ ಪೌಷ್ಠಕತೆ ಕುರಿತಂತೆ ಅರಿವು ಮೂಡಿಸುವುದು ಇದರ ಉದ್ದೇಶವಾಗಿದೆ. ಪ್ರತಿ ರಾಜ್ಯ, ಜಿಲ್ಲಾ, ತಾಲೂಕು ಮಟ್ಟದಲ್ಲಿ ಇದು ಕಾರ್ಯ ನಿರ್ವಹಿಸುತ್ತಿದೆ. ಮಹಿಳಾ ಸಬಲೀಕರಣವು ಅರ್ಥ ಪೂರ್ಣವಾಗಬೇಕಾದರೆ ಈ ಕೆಳಗೆ ನೀಡಿದ ಅಂಶ ಮಹಿಳೆಯರು ಪಾಲಿಸಬೇಕಾಗಿದೆ:

- ಅನಗತ್ಯ ದುಂದು ವೆಚ್ಚಗಳಿಗೆ ಕಡಿವಾಣ ಹಾಕಬೇಕು
- ಕುಟುಂಬದ ಆದ್ಯತೆಗಳಿಗನುಗುಣವಾಗಿ ಮೊತ್ತ ವಿನಿಯೋಗಮಾಡಬೇಕು. ಕುಟುಂಬದ ಆರ್ಥಿಕ ಬಜೆಟನ್ನು ಸರಳವಾಗಿ ತಯಾರಿಸಿ ಈ ಪ್ರಕಾರ ವಿನಿಯೋಗ ಮಾಡಬೇಕು
- ಆದಾಯ ವೃದ್ಧಿಯಾಗುವ ಚಟುವಟಿಕೆಗಳನ್ನು ಕೈಗೊಳ್ಳುವಲ್ಲಿ ಕುಟುಂಬದ ಸದಸ್ಯರಿಗೆ ಸಹಕಾರ ಒದಗಿಸಬೇಕು
- ಆರೋಗ್ಯ ರಕ್ಷಣೆ, ಜೀವನ ಭದ್ರತೆಗೆ ಬೇಕಾದ ವಿಮೆಗಳನ್ನು ಮಾಡಿಸಬೇಕು
- ಮಕ್ಕಳ ವಿದ್ಯಾಭ್ಯಾಸಕ್ಕೆ ಆದ್ಯತೆ ನೀಡಬೇಕು. ಹೆಣ್ಣು/ಗಂಡು ಮಕ್ಕಳ ನಡುವೆ ಭೇದವಿರಬಾರದು
- ಶಿಸ್ತು ಬದ್ಧ ಆರ್ಥಿಕ ವ್ಯವಹಾರ ಪಾಲನೆ ಮಾಡಬೇಕು

- ಮನೆಯಲ್ಲಿ ಅನಗತ್ಯ ಉಪಕರಣಗಳನ್ನು ಇಟ್ಟುಕೊಳ್ಳದೇ ಭವಿಷ್ಯಕ್ಕಾಗಿ ಹಣ ಕೂಡಿಡುವುದು ಅವಶ್ಯಕ
- ಕುಟುಂಬದ ಆರೋಗ್ಯಕ್ಕಾಗಿ ಉತ್ತಮ ಪೌಷ್ಠಿಕ ಅಹಾರದ ಬಳಕೆ
- ಟಿ.ವಿ., ಮೊಬೈಲ್ ಮತ್ತು ಇತರ ಸಾಮಾಜಿಕ ಜಾಲತಾಣಗಳ ಬಗ್ಗೆ ಅದರಿಂದಾಗುತ್ತಿರುವ ಅನೂಕೂಲ ಮತ್ತು ಅನಾನೂಕೂಲಗಳ ಬಗ್ಗೆ ತಿಳಿದುಕೊಂಡಿರಬೇಕು. ಈ ವಿಚಾರದಲ್ಲಿ ಹದಿಹರೆಯದ ಮಕ್ಕಳ ಬಗ್ಗೆ ವಿಶೇಷ ಕಾಳಜಿ ವಹಿಸಬೇಕು.
- ಮನೆ ಪರಿಸರ ಸ್ವಚ್ಚತೆ

**ಸ್ವ–ಸಹಾಯ ಸಂಘಗಳ ವಾರದ ಸಭೆ**

ಮಹಿಳೆಯರಿಗೆ ಇದೊಂದು ಬಹಳ ಪ್ರಮುಖವಾದ ವೇದಿಕೆ ಸ್ವ–ಸಹಾಯ ಸಂಘಗಳ ವಾರದ ಸಭೆ ಅತ್ಯಂತ ಮಹತ್ತರವಾದುದು. ಇಲ್ಲಿ ಪ್ರತಿಯೊಬ್ಬ ಸದಸ್ಯರು ತಮ್ಮ ಕೊಡುಗೆಯನ್ನು ನೀಡಬೇಕು ಸಂಘಗಳ ಸಭೆ ನಡೆಸುವುದು ದಾಖಲಾತಿಯನ್ನು ಬರೆಯುವುದು, ಮೊತ್ತ ಸಂಗ್ರಹಣೆ ಮಾಡುವುದು, ಬ್ಯಾಂಕಿಗೆ ಮೊತ್ತ ಜಮಾ ಮಾಡುವುದು, ಸಭೆ ನಿರ್ವಹಣೆ, ನಿರ್ಣಯಗಳನ್ನು ಬರೆಯುವುದು, ಹೀಗೆ ಸಂಘದ ಸಂಪೂರ್ಣ ನಿರ್ವಹಣೆಯನ್ನು ಸದಸ್ಯರು ಸೇರಿ ಮಾಡಲಾಗುತ್ತದೆ. ಇದರಿಂದ ವ್ಯವಹಾರ ಜ್ಞಾನ ವೃದ್ಧಿಯಾಗುತ್ತದೆ. ಮಾತಿನ ಶೈಲಿ, ಕೌಶಲ್ಯ, ತಿಳುವಳಿಕೆ ಮಟ್ಟ ಹೆಚ್ಚಾಗುತ್ತದೆ. ಕ್ರಮೇಣ ವ್ಯವಹಾರಗಳನ್ನು ಶಿಸ್ತು ಬ್ಧದ್ದವಾಗಿ ಮಾಡುವುದು ಹೇಗೆ ಎಂಬ ವಿಚಾರ ತಿಳಿದುಕೊಳ್ಳಲು ಸಾದ್ಯವಾಗುತ್ತದೆ. ಈ ಶಿಸ್ತು ವೈಯಕ್ತಿಕ ಜೀವನದ ತಮ್ಮ ಕುಟುಂಬದಲ್ಲಿ ಅಳವಡಿಸಿಕೊಳ್ಳಲಾಗುತ್ತದೆ. ಸಂಘದ ವಾರದ ಸಭೆಯೇ ಶಿಸ್ತನ್ನು ಅಳವಡಿಸಿಕೊಳ್ಳಲು ಒಂದು ಸೂಕ್ತವಾದ ವೇದಿಕೆ ಇಲ್ಲಿ ಲಭ್ಯವಾಗುವ ಮಾಹಿತಿಗಳಿಗೆ ಕೊರತೆಯಿಲ್ಲ. ಸಂಘಗಳಲ್ಲಿ ಆರ್ಥಿಕ ವ್ಯವಹಾರದ ಬಗ್ಗೆ, ಸಂಘಟನೆಯ ಬಗ್ಗೆ, ಆರೋಗ್ಯ, ನೈರ್ಮಲ್ಯ, ಸ್ವಚ್ಚತೆ, ಪೌಷ್ಟಿಕ ಆಹಾರ, ಸಹ ಉದ್ಯೋಗ ಅವಕಾಶಗಳು, ಸಾಮಾಜಿಕ ವಿಚಾರಗಳು, ಕೃಷಿ ಮತ್ತು ತಂತ್ರಜ್ಞಾನ, ಹೀಗೆ ವೈವಿಧ್ಯಮಯ ಕ್ಷೇತ್ರಗಳಿಗೆ ಸಂಬಧಿಸಿದಂತೆ ನಿರಂತರವಾದ ಮಾಹಿತಿ ಪೂರೈಕೆ ಆಗುತ್ತಿರುತ್ತದೆ. ಬಹಳಷ್ಟು ಪರಿವರ್ತನೆಯನ್ನು ತನ್ನಲ್ಲಿ ತಾನು ಮಾಡಿಕೊಳ್ಳಲು ಸಾಧ್ಯವಿದೆ. ಮಹಿಳೆ ಇವತ್ತು ಸಬಲೆಯಾಗುವುದಕ್ಕೆ ಯಾವುದೇ ತೊಡಕಿಲ್ಲ. ಆದರೆ ತನ್ನನೂ ತಾನು ತೊಡಗಿಸಿಕೊಳ್ಳುವುದು ಅತ್ಯಂತ ಅವಶ್ಯಕವಾಗಿದೆ. ಸಮಾಜದಲ್ಲಿ ಆಗುತ್ತಿರುವ ಬದಲಾವಣೆಗಳು, ಅಭಿವೃದ್ಧಿಗಳು, ಬೆಳವಣಿಗಳಿಗೆ ಸರಿಯಾಗಿ ತನ್ನನು ತಾನು ಒದಗಿಸಿಕೊಳ್ಳುದರಲ್ಲಿ ಆಕೆಯ ಜಾಣ್ಮೆ ಅಡಗಿದೆ. ಸರಕಾರ, ಸಂಘ ಸಂಸ್ಥೆಗಳು, ಕಾಯ್ದೆ ಕಾನೂನುಗಳು ಇಂದು ಮಹಿಳೆಯ ಬೆನ್ನೆಲುಬಾಗಿ ನಿಂತಿದೆ. ಇದನ್ನು ಅರಿತು ಕೊಂಡು ಉತ್ತಮ ಉಜ್ವಲ ಭವಿಷ್ಯವನ್ನು ರೂಪಿಸಿಕೊಳ್ಳುವಲ್ಲಿ ಮಹಿಳಾ ಸಮುದಾಯ ತೊಡಗಿದೆ.

**ಉಪಸಂಹಾರ**

ಒಟ್ಟಾರೆ ಹೀಗೆ ದೇಶದ ನಾನಾ ಭಾಗಗಳಲ್ಲಿ ಮಹಿಳೆ/ಹೆಣ್ಣು ಮಕ್ಕಳು/ಮಕ್ಕಳ ಪರವಾಗಿ ತಮ್ಮದೇ ಆದತಂಹ ವಿನೂತನ ಕಾರ್ಯಗಳನ್ನು ಹಮ್ಮಿಕೊಂಡು ಹಲವಾರು ಸಂಘ–ಸಂಸ್ಥೆಗಳು ಕಾರ್ಯ

ನಿರ್ವಹಿಸುತ್ತಿವೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಇಂತಹ ಉತ್ಕೃಷ್ಟವಾದ ಯೋಜನೆಗಳನ್ನು ರೂಪಿಸಿ ಸಂಸ್ಥೆಗಳ ಮೂಲಕ ತನ್ನ ಮಹಿಳಾಪರ ಕಾರ್ಯಕ್ರಮಗಳನ್ನು ಅರ್ಥಪೂರ್ಣವಾಗಿ ನಡೆಸಿಕೊಂಡು ಹೊಗಲು ಸಾಧ್ಯವಿದೆ. ಪ್ರಸ್ತುತ ದಿನಗಳಲ್ಲಿ ಬೆಳೆಯುತ್ತಿರುವ ಸ್ವ–ಸಹಾಯ ಸಂಘಗಳು ಮಹಿಳಾ ಸಂಘಟನೆಗೆ ಒಂದು ಉತ್ತಮ ಉದಾಹರಣೆ. ಇಂದು ಸರ್ಕಾರಗಳು ಸ್ವಯಂ ಸೇವಾ ಸಂಸ್ಥೆಗಳು, ಬ್ಯಾಂಕುಗಳು, ಕೋ–ಆಪರೇಟಿವ್ ಸೊಸೈಟಿಗಳು ಸಂಘಗಳನ್ನು ಉತ್ತೇಜಿಸುತ್ತವೆ. ಅವರಿಗೆ ಆರ್ಥಿಕ ಸವಲತ್ತುಗಳನ್ನು ಒದಗಿಸುತ್ತಿವೆ. ಮಹಿಳಾ ಸಬಲೀಕರಣದತ್ತ ಒಂದು ದಿಟ್ಟ ಹೆಜ್ಜೆಯೇ ಈ ಸ್ವ ಸಹಾಯ ಸಂಘಗಳು ಇಂದು ಆರ್ಥಿಕವಾಗಿ ಮಹಿಳೆಯರು ಸಬಲರಾಗಿದ್ದಾರೆ. ತನ್ನ ಕುಟುಂಬದಲ್ಲಿಯು ಒಂದು ವಿಶಿಷ್ಠ ಸ್ಥಾನ ಮಾನ ಸಿಕ್ಕಿದ್ದರೆ ಇಂತಹ ಸಂಘಗಳಿಂದ ಎಂದು ಹೇಳಬಹುದು.

**ಪರಾಮರ್ಶನ ಗ್ರಂಥಗಳು**


- ಚಂದ್ರಶೇಖರ್. ಸಿ.ಆರ್. (2014). ಉಧ್ಯೋಗಸ್ಥ ಮಹಿಳೆ ಮತ್ತು ವ್ಯಕ್ತಿತ್ವ ವಿಕಾಸನ. ನವಕರ್ನಾಟಕ ಪಬ್ಲಿಕೇಷನ್, ಬೆಂಗಳೂರು.
- ಜಯದೇವ. ಜಿ.ಎಸ್. (2014). ನೊಂದ ಮಹಿಳೆಯರು ಆತ್ಮವಿಶ್ವಾಸದೆಡೆಗೆ. ನವ ಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು.
- ವಿಠ್ಠಲ್.ಟಿ ಗಾಯಕ್ವಾಡ್. (2018). ಸ್ತ್ರೀ ವಾದಿ ವಿಮರ್ಶೆ ಸ್ವರೂಪ ಮತ್ತು ಪರಿಕಲ್ಪನೆ. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಶ್ರೀನಿವಾಸ್ ಮುದ್ರಕರ್ತ. (2021). ಸಾಂಸ್ಥಿಕ ಬಲವರ್ದನೆಗಾಗಿ ಮಹಿಳಾ ಶಕ್ತಿ. ರಿಂಗಲ್ ಪ್ರೀಂಟ್ ಸರ್ವಿಸ್, ಬೆಂಗಳೂರು.